ನಿರ್ಮಿಸುವವರೆಗೆ ಹಳೆಯ ಸೇತುವೆಯನ್ನು ತಾತ್ಕಾಲಿಕವಾಗಿ ದುರಸ್ಥಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ಸರ್ಕಾರದ ಗಮನಕ್ಕೆ ಬಂದಿದೆ.

ಆ) ಹೊಸ ಸೇತುವೆ ಕಾಮಗಾರಿಗೆ ರೂ.17.55 ಕೋಟಿ ಮೊತ್ತಕ್ಕೆ ವಿವರವಾದ ಯೋಜನಾ ವರದಿಯನ್ನು ತಯಾರಿಸಿ ಆಡಳಿತಾತ್ಮಕ ಅನುಮೋದನೆಗೆ ಸೂಕ್ತ ಅನುದಾನವನ್ನು ಯೋಜಿಸಲಾಗುತ್ತಿದೆ.

ಇ) ಸೂಕ್ತ ಅನುದಾನವನ್ನು ಯೋಜಿಸಿ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಈ) ಅನುದಾನದ ಅಲಭ್ಯತೆಯ ಕಾರಣ ಆಡಳಿತಾತ್ಮಕ ಮಂಜೂರಾತಿ ದೊರೆತಿರುವುದಿಲ್ಲ.

ಉ) ಆಡಳಿತಾತ್ಮಕ ಅನುಮೋದನೆ ದೊರೆತ ನಂತರ ಟೆಂಡರ್ ಪ್ರಕ್ರಿಯೆ ಮಾಡಲಾಗುವುದು.

ಊ) ಆಡಳಿತಾತ್ಮಕ ಅನುಮೋದನೆ ನೀಡಲು ವ್ಯವಸ್ಥೆ ಮಾಡಿ ಟೆಂಡರ್ ಮೂಲಕ ಗುತ್ತಿಗೆದಾರರನ್ನು ನಿಗದಿಪಡಿಸಿದ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಋ) ಸರ್ಕಾರದ ಗಮನಕ್ಕೆ ಬಂದಿದೆ.

ಎ) ತಾತ್ಕಾಲಿಕ ದುರಸ್ಥಿಗಾಗಿ ಕ್ರಮ ಕೈಗೊಳ್ಳಲಾಗುತ್ತಿದ್ದು, ರೂ.30.00 ಲಕ್ಷಗಳ ಅನುದಾನ ಬಿಡುಗಡೆ ಮಾಡಿದೆ.

ರಸ್ತೆ ಹದಗೆಟ್ಟಿರುವುದು

260 (606) ಶ್ರೀಮತಿ ಕಲ್ಪನಾ ಸಿದ್ದರಾಜು (ಮದ್ದೂರು) :– ಲೋಕೋಪಯೋಗಿ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮದ್ದೂರು ತಾಲ್ಲೂಕು ವ್ಯಾಪ್ತಿಯ ಎಂ.ಜಿ.ಎಂ. ಭಾರತೀನಗರ, ಹಲಗೂರು ವೃತ್ತದಿಂದ ಅಣ್ಣೂರು, ಗೇಟ್‌ವರೆಗೆ ರಸ್ತೆಯು ತಂಬಾ ಹದಗೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ರಸ್ತೆಯನ್ನು ದುರಸ್ತಿಗೊಳಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ;

ಇ) ಹಾಗಿದ್ದಲ್ಲಿ, ಯಾವಾಗ ರಸ್ತೆಯನ್ನು ದುರಸ್ತಿಗೊಳಿಸಲಾಗುವುದು.

ಈ) ಈ ರಸ್ತೆ ದುರಸ್ತಿ ಕಾಮಗಾರಿಗಾಗಿ ಸರ್ಕಾರ ಅನುದಾನವನ್ನೇನಾದರೂ ಬಿಡುಗಡೆ ಮಾಡಿದೆಯೇ;

ಉ) ಹಾಗಿದ್ದಲ್ಲಿ, ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ (ವಿವರಗಳನ್ನು ನೀಡುವುದು) ?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು):–

ಅ) ಮಂಡ್ಯ–ಗುತ್ತಲು–ಮುತ್ತತ್ತಿ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು, ಇದರ ಒಟ್ಟು ಉದ್ದ 63.00 ಕಿ.ಮೀ. ಇರುತ್ತದೆ. ಈ ರಸ್ತೆಯ ಜಿಲ್ಲಾ ಕೇಂದ್ರವಾದ ಮಂಡ್ಯದಿಂದ ಭಾರತೀನಗರಕ್ಕೆ (ಕೆ.ಎಂ.ದೊಡ್ಡಿ) ಹಲಗೂರು ಮಾರ್ಗ ಮುತ್ತತ್ತಿ ಸೇರುತ್ತದೆ. ಈ ರಸ್ತೆಯಯ ಮಂಡ್ಯ, ಮದ್ದೂರು ಮತ್ತು ಮಳವಳ್ಳಿ ತಾಲ್ಲೂಕುಗಳಲ್ಲಿ ಹಾದು ಹೋಗುತ್ತದೆ. ವಿವರಗಳು ಈ ಕೆಳಗಿನಂತಿವೆ:

ಕ್ರ. ಸಂ.	ರಸ್ತೆ ಸಂಖ್ಯೆ	ತಾಲ್ಲೂಕು	ಸರಪಳಿ ಕಿ.ಮೀ. ಗಳಲ್ಲಿ		ಒಟ್ಟು ಉದ್ದ ಕಿ.ಮೀ.ಗಳಲ್ಲಿ
			ಯಿಂದ	ವರೆಗೆ	
1	MND 18	ಮಂಡ್ಯ	0.00	7.00	7.00
2	MDR 9	ಮದ್ದೂರು	7.00	29.00	22.00
3	MLV 5	ಮಳವಳ್ಳಿ	29.00	63.00	34.00
			ಒಟ್ಟು: **63** ಕಿ.ಮೀ.		**63.00**

ಭಾರತೀನಗರ–ಹಲಗೂರು ವೃತ್ತದಿಂದ ಅಣ್ಣೂರು ಗೇಟ್ ವರೆಗಿನ ರಸ್ತೆಯು ಮದ್ದೂರು ತಾಲ್ಲೂಕಿನ ಮಂಡ್ಯ ಗುತ್ತಲು ಮುತ್ತತ್ತಿ ರಸ್ತೆಯ ಒಂದು ಭಾಗವಾಗಿರುತ್ತದೆ. ಈ ರಸ್ತೆಯ ಸರಪಳಿ 17.00 ಕಿ.ಮೀ. ನಿಂದ 17.90 ಕಿ.ಮೀ. ವರೆಗೆ 900.00 ಮೀಟರ್ ಇರುತ್ತದೆ. ಸದರಿ ಸರಪಳಿಯ ರಸ್ತೆಯು ಭಾರತೀನಗರದ ಚಾಮುಂಡೇಶ್ವರಿ

ಸಕ್ಕರೆ ಕಾರ್ಖಾನೆ ಮುಂಭಾಗ ಹಾದು ಹೋಗುವುದರಿಂದ ಕಾರ್ಖಾನೆಗೆ ಕಬ್ಬು ಸರಬರಾಜು ಮಾಡುವ ಎತ್ತಿನಗಾಡಿ, ಲಾರಿಗಳು, ರಸ್ತೆಯಲ್ಲಿ ನಿಲ್ಲುವುದರಿಂದ ಕಬ್ಬಿನ ಕಸ ಮತ್ತು ದನ–ಕರುಗಳ ಕಸ ಸೇರಿ ರಸ್ತೆಯು ಹಾಳಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) 2011–12ನೇ ಸಾಲಿನ ಮುಂಗಾರು ಪೂರ್ವ ನಿರ್ವಹಣೆಗೆ ನೀಡಲಾಗಿದ್ದ ಅನುದಾನದಲ್ಲಿ ರೂ.2.00 ಲಕ್ಷಗಳನ್ನು ವೆಚ್ಚ ಮಾಡಿ 900 ಮೀಟರ್ ರಸ್ತೆಗಳ ಗುಂಡಿ ಮುಚ್ಚಿ ವಾಹನಗಳ ಸುಗಮ ಸಂಚಾರಕ್ಕೆ ಅನುವು ಮಾಡಲಾಗಿರುತ್ತದೆ.

ಇ) ಮಂಡ್ಯ ಗುತ್ತಲು ಮುತ್ತತ್ತಿ ರಸ್ತೆ ಅಭಿವೃದ್ಧಿ ಕಾಮಗಾರಿಯ ಅಂದಾಜು ಮೊತ್ತ ರೂ.400.00 ಲಕ್ಷಗಳ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಈ) ಅನುದಾನ ಬಿಡುಗಡೆಯಾಗಿರುತ್ತದೆ.

ಉ) ರೂ.2.00 ಲಕ್ಷಗಳ ಅನುದಾನವನ್ನು 900 ಮೀಟರ್ ರಸ್ತೆಗಳ ನಿರ್ವಹಣೆಗೆ ಬಿಡುಗಡೆ ಮಾಡಲಾಗಿದೆ.

ಕುಡಿಯುವ ನೀರು ಸರಬರಾಜು

261 (540) ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :– ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕೊಪ್ಪಳ ನಗರಕ್ಕೆ ಕುಡಿಯುವ ನೀರಿನ ಯೋಜನೆಯಡಿ ಕುಡಿಯುವ ನೀರು ಸರಬರಾಜಿಗಾಗಿ ರೂ. 54.56 ಕೋಟಿಗಳ ಅನುದಾನಕ್ಕೆ ಆಡಳಿತಾತ್ಮಕ ಅನುಮೋದನೆಯು ದೊರಕಿರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಕಾಮಗಾರಿಯ ಟೆಂಡರ್ ಪ್ರಕ್ರೀಯೆಯನ್ನು ಇದುವರೆವಿಗೂ ಪೂರ್ಣಗೊಳಿಸದೇ ಇರುವುದು ಸರಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಕಾಮಗಾರಿಯನ್ನು ಚಾಲನೆ ಮಾಡದಿರಲು ಕಾರಣಗಳೇನು (ವಿವರಗಳನ್ನು ನೀಡುವುದು) ?

ಶ್ರೀ ಎಸ್. ಸುರೇಶ್ ಕುಮಾರ್ (ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು):–

ಅ) ಬಂದಿದೆ